# ಪ್ರಹಸನ ಪ್ರಸಂಗ

**ಒಂದು ಶಾಲೆ.** ಕ್ಲಾಸ್ ನಡೆಯುತ್ತಿದೆ. ಪೂರ್ವಸೂಚನೆ ಇಲ್ಲದೆ ಇನ್‌ಸ್ಪೆಕ್ಟರ್ ಹಾಜರ್. ಅವರು ನೇರವಾಗಿ ಒಂದು ತರಗತಿಗೆ ಹೋದರು. ಅಲ್ಲಿಯ ಅರಾಜಕತೆಯನ್ನು ಕಂಡು ದಿಗ್ಭ್ರಮೆಗೊಂಡರು. ವಿದ್ಯಾರ್ಥಿಗಳೆಲ್ಲರೂ ಕುಣಿದು ಕುಪ್ಪಳಿಸುತ್ತಿದ್ದಾರೆ, ಕಿರುಚುತ್ತಿದ್ದಾರೆ. ಮೇಜು, ಕುರ್ಚಿ, ಬೆಂಚುಗಳೆಲ್ಲವೂ ಅಸ್ತವ್ಯಸ್ತವಾಗಿ ಹರಡಿ ಕೊಂಡಿವೆ.

ಇನ್‌ಸ್ಪೆಕ್ಟರ್ ಒಳಗೆ ಹೋದರು. ಇವರನ್ನು ಯಾರೂ ಗಮನಿಸಲೇ ಇಲ್ಲ. ವಿದ್ಯಾರ್ಥಿಗಳ ಪೈಕಿ ಎತ್ತರದ ಒಬ್ಬ ವ್ಯಕ್ತಿಯನ್ನು ಗುರುತಿಸಿದರು. ಇವನೇ ತುಂಟತನದ ದಂಡನಾಯಕನೆಂದು ಭಾವಿಸಿ ಅವನನ್ನು ಎಳೆದು ಥಳಿಸಿ ತರಗತಿಯಿಂದ ಹೊರಗೆ ತಳ್ಳಿದರು.

ಅವರ ಈ ಸಾಹಸಕಾರ್ಯ ಎಲ್ಲರನ್ನೂ ಶಾಂತಗೊಳಿಸಿತು. ಕೂಡಲೆ ಎಲ್ಲರೂ ತಮ್ಮ ತಮ್ಮ ಸ್ಥಳದಲ್ಲಿ ತೆಪ್ಪಗೆ ಕುಳಿತುಕೊಂಡರು. ಇನ್‌ಸ್ಪೆಕ್ಟರ್ ಶಿಸ್ತಿನ ಬಗ್ಗೆ ಒಂದು ದೀರ್ಘ ಉಪನ್ಯಾಸವನ್ನು ನೀಡಿದರು. ಕೊನೆಗೆ ಹಿಂದಿನ ಬೆಂಚಿನ ವಿದ್ಯಾರ್ಥಿಯೊಬ್ಬನು ಎದ್ದು ನಿಂತು ಕೇಳಿದನು :

'ಸಾರ್, ಈಗ ನಮ್ಮ ಉಪಾಧ್ಯಾಯರು ಒಳಗೆ ಬರಬಹುದೆ?' ಎಂದು.

ನಮ್ಮ ವ್ಯಕ್ತಿತ್ವದೊಳಗೂ ಇಂಥದೇ ಅರಾಜಕತೆ ಇದೆ. ಇಂದ್ರಿಯಗಳು, ಆಲೋಚನೆಗಳು, ಆಸೆಗಳು, ಭಾವೋದ್ವೇಗಗಳು ಪ್ರೇತನರ್ತನ ಮಾಡುತ್ತಿರುತ್ತವೆ. ಅವುಗಳನ್ನೆಲ್ಲ ತನ್ನ ಹಿಡಿತದಲ್ಲಿರಿಸಿ ಆಳಬೇಕಾದ ಬುದ್ಧಿಯೂ ಅವುಗಳ ಜೊತೆ ಸೇರಿಕೊಂಡು ಕುಣಿಯುತ್ತಿರುತ್ತದೆ.

*　　*

**ನೈಜ ಆಧ್ಯಾತ್ಮಿಕ** ಪರಿವರ್ತನೆಗೂ ಮತಾಂತರಕ್ಕೂ ಬಹಳ ವ್ಯತ್ಯಾಸವಿದೆ. ಮತಾಂತರದಿಂದ ಆಂತರಿಕ ಪರಿವರ್ತನೆಯಾಗಿ ಪ್ರಾಪಂಚಿಕನು ಆಧ್ಯಾತ್ಮಿಕನಾದರೆ ಅದು ಒಳ್ಳೆಯದು. ಇಲ್ಲದಿದ್ದರೆ ಅದು ಕೇವಲ ನಾಮಾಂತರವಷ್ಟೆ—ಒಂದು ಧರ್ಮದ ಪಟ್ಟಿಯಿಂದ ಇನ್ನೊಂದು ಧರ್ಮದ ಪಟ್ಟಿಗೆ ಹೆಸರು ಬದಲಾವಣೆ.

ಜನಾರ್ದನ ಎಂಬ ಹಿಂದೂವನ್ನು ಕ್ರೈಸ್ತ ಪಾದ್ರಿಯೊಬ್ಬರು ಪರಿವರ್ತಿಸಿದರು. ಅವನ ಮೇಲೆ ಪವಿತ್ರಜಲವನ್ನು ಚಿಮುಕಿಸಿ, 'ಇಂದಿನಿಂದ ನೀನು ಜೋನಾಥಾನ್. ಪ್ರತಿ ಭಾನುವಾರ ಸಬ್ಬತ್ ಆಚರಿಸಬೇಕು' ಎಂದು ಹೇಳಿ ಕ್ರೈಸ್ತಧರ್ಮೀಯರ ಪಟ್ಟಿಯಲ್ಲಿ ಅವನ ಹೆಸರನ್ನು ಸೇರಿಸಿದರು.

ಆತ ಸಬ್ಬತ್ ಸರಿಯಾಗಿ ಆಚರಿಸುತ್ತಾನೋ ಇಲ್ಲವೊ ಎಂದು ನೋಡಲು ಪಾದ್ರಿಗಳು ಮುಂದಿನ ಭಾನುವಾರ ಅವನ ಮನೆಗೆ ಹೋದರು. ಸಬ್ಬತ್ ದಿನ ಹಂದಿಮಾಂಸ ತಿನ್ನಬಾರದು, ಆದರೆ ದನದ ಮಾಂಸ ತಿನ್ನಬಹುದು. ಅವನು ಹಂದಿಮಾಂಸವನ್ನು ಊಟಕ್ಕಾಗಿ ತಂದಿದ್ದನು.

ಪಾದ್ರಿ : ಸಬ್ಬತ್ ದಿನ ಹಂದಿಮಾಂಸ ತಿನ್ನಬಾರದೆಂದು ನಿನಗೆ ತಿಳಿಯದೆ?

ಅವನು : ಗೊತ್ತು, ಫಾದರ್.

ಪಾದ್ರಿ : ಮತ್ತೆ ಇದೇನಿದು?

ಅವನು : ಇದು ದನದ ಮಾಂಸ.

ಪಾದ್ರಿ : ಹಂದಿ ಮಾಂಸದಂತಿದೆಯಲ್ಲ?

ಅವನು : ಇಲ್ಲ ಫಾದರ್, ನಾನು ಅದನ್ನು ಮತಾಂತರಗೊಳಿಸಿದ್ದೇನೆ.

ಪಾದ್ರಿ : ಹೇಗೆ?

ಅವನು : ಪವಿತ್ರ ಜಲವನ್ನು ಅದರ ಮೇಲೆ ಚಿಮುಕಿಸಿ 'ಇಂದಿನಿಂದ ನೀನು ಹಂದಿಮಾಂಸವಲ್ಲ. ದನದ ಮಾಂಸ' ಎಂದುಬಿಟ್ಟೆ.

*　　*

ತೃಣಾದಪಿ ಲಘುಸ್ತೂಲಃ
ತೂಲಾದಪಿ ಚ ಯಾಚಕಃ ।
ವಾಯುನಾ ಕಿಂ ನ ನೀತೋಽಸೌ
'ಮಾಮಯಂ ಯಾಚಯೇದಿತಿ ॥

*ಹುಲ್ಲಿಗಿಂತಲೂ ಹಗುರವಾದುದು ಹತ್ತಿ.*

*ಹತ್ತಿಗಿಂತಲೂ ಹಗುರವಾದುದು ಯಾವುದು?*

*ಯಾಚಕನು, ಅಂದರೆ ಇತರರನ್ನು ಬೇಡುವವನು.*

*ಅವನು ಹತ್ತಿಗಿಂತಲೂ ಹಗುರನಾದರೆ ಗಾಳಿ ಏಕೆ ಅವನನ್ನು ಹಾರಿಸಿಕೊಂಡು ಹೋಗುವುದಿಲ್ಲ?*

*ಗಾಳಿಗೆ ಅವನನ್ನು ಕಂಡರೆ ಭಯ*

*ಭಯವೇಕೆ?*

*ತನ್ನಿಂದಲೂ ಅವನು ಯಾಚಿಸಬಹುದೆಂಬ ಭಯ!*

---

ಅವಿಲಾದ ಸಂತ ಥೆರೆಸಾಗೆ ಮುಪ್ಪು ಬಂದಿತ್ತು. ಅವರು ತಮ್ಮ ಮೇಲ್ವಿಚಾರಣೆಗೊಳಪಟ್ಟ ಕಾನ್ವೆಂಟ್ ಒಂದನ್ನು ಪರಾಮರ್ಶಿಸಲು ಹೋಗಿದ್ದರು. ದಾರಿಯಲ್ಲಿ ಅವರು ಒಂದು ಹೊಳೆ ದಾಟಬೇಕಾಗಿ ಬಂತು. ಆಕೆ ನೀರಿನಲ್ಲಿ ಹಾಯ್ದುಹೋಗುತ್ತ ನದಿಯ ನಡುವಿಗೆ ಬಂದಾಗ ನದಿಯ ಮೇಲ್ಭಾಗದ ಪರ್ವತಪ್ರದೇಶದಲ್ಲಿ ಭಾರಿ ಮಳೆಯಾದುದರಿಂದಾಗಿ ನದಿಯ ಪ್ರವಾಹ ಅತ್ಯಧಿಕವಾಯಿತು. ತಾನು ಇನ್ನೇನು ಕೊಚ್ಚಿಹೋಗುತ್ತೇನೆ ಎಂದೆನಿಸಿತು. ಆಗ ಆಕೆ ಭಕ್ತಿಯ ಕ್ರೋಧಾವೇಶದಿಂದ ದೇವರನ್ನು ಕೇಳಿದರು: 'ಭಗವಂತ! ನಿನ್ನ ಭಕ್ತರನ್ನು ಹೀಗೆ ನಡೆಸಿಕೊಳ್ಳುವೆಯಲ್ಲ! ಇದು ಸರಿಯೇ?' ಭಗವಂತನು ಉತ್ತರಿಸಿದ : 'ಹೌದು, ನಾನು ಕೆಲವೊಮ್ಮೆ ನನ್ನ ಭಕ್ತರನ್ನು ಹೀಗೆ ಪರೀಕ್ಷಿಸುತ್ತೇನೆ.' ಅದಕ್ಕೆ ಥೆರೆಸಾ ಸಪ್ರೇಮದಿಂದ ಚುಚ್ಚು ಉತ್ತರ ಕೊಡುತ್ತ, 'ಆಹಾ! ಆದ್ದರಿಂದಲೇ ನಿನ್ನ ಭಕ್ತರ ಸಂಖ್ಯೆ ಇಷ್ಟು ವಿರಳವಾಗುತ್ತಿದೆ!'